# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ ಃ 88-2016

**ಪಿಡಬ್ಲ್ಯೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 07-08-2018 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ ಃ

ದಿ ಃ 24-08-1999 ನೇ ಸಾಲಿನ ಕ್ರಯಕರಾರುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಸದ್ರಿ ದಾಖಲಾತಿಯಲ್ಲಿರುವ ಸಹಿಯನ್ನು ಗುರ್ತಿಸುವ ಬಗ್ಗೆ ಪ್ರತಿವಾದಿ ಪರ ವಕೀಲರು ತಕರಾರನ್ನು ಎತ್ತಿದ್ದು ಸದ್ರಿ ತಕರಾರು ಏನೆಂದರೆ ಈ ದಾಖಲಾತಿಯನ್ನು ಬರೆಯುವ ಸಮಯದಲ್ಲಿ ಇವರು ಹಾಜರು ಇರಲಿಲ್ಲ ಮತ್ತು ಇವರು ಮಾರಾಟಗಾರರು ಅಲ್ಲ ಮತ್ತು ಖರೀದಿದಾರರು ಅಲ್ಲ ಹಾಗಾಗಿ ಸದ್ರಿ ದಾಖಲಾತಿಯಲ್ಲಿರುವ ಸಹಿಗಳನ್ನು ಗುರ್ತಿಸಲು ಬರುವುದಿಲ್ಲವೆಂದು ಹೇಳಿರುತ್ತಾರೆ. ಈಗಾಗಲೇ ಈ ದಾವೆಯಲ್ಲಿ ಈ ಸಾಕ್ಷಿಯು ವಾದಿಯ ಪರವಾಗಿ ಎಸ್ ಪಿ ಎ ಮೂಲಕ ಹಾಜರಾಗಿರುವುದರಿಂದ ವಾದಿಯನ್ನೆ ಪ್ರತಿನಿದಿಸಿರುತ್ತಿರುವುದರಿಂದ ಪ್ರತಿವಾದಿಯ ತಕರಾರನ್ನು ತಳ್ಳಿ ಹಾಕಿ ನಿಪಿ-1 ರಲ್ಲಿ ಸಹಿ ಮಾಡಿರುವ ಪ್ರತಿವಾದಿಯ ತಾಯಿಯಾದ ಓಲಿ ಗಂಗಮ್ಮ ಹೆಬ್ಬಟ್ಟಿನ ಗುರ್ತನ್ನು ಹಾಕಿರುತ್ತಾರೆ ಮತ್ತು ಓಲಿ ಮುದುಕಪ್ಪ ಸಹಿ ಮಾಡಿರುತ್ತಾರೆ ಅವರ ಸಹಿಯನ್ನು ನಿಪಿ-1 (ಎ) ಎಂದು ಗುರ್ತಿಸಲಾಯಿತು. ಓಲಿ ವಿರುಪಾಕ್ಷಪ್ಪನ ಸಹಿಯನ್ನು ನಿಪಿ-1 (ಬಿ) ಎಂದು, ಓಲಿ ಮಹೇಶ್ವರಪ್ಪನ ಸಹಿಯನ್ನು ನಿಪಿ-1 (ಸಿ) ಎಂದು ಗುರ್ತಿಸಲಾಯಿತು. ಸಾಕ್ಷಿದಾರರಾಗಿ 05 ಜನರು ಸಹಿ ಮಾಡಿದ್ದು ಅವರ ಸಹಿಗಳನ್ನು ನಿಪಿ-1 (ಡಿ) ದಿಂದ (ಎಚ್) ಎಂದು ಗುರ್ತಿಸಲಾಯಿತು. ಸಾಕ್ಷಿದಾರರಲ್ಲಿ 2 ನೇ ಮತ್ತು 04 ನೇ ಸಾಕ್ಷಿದಾರರು ತೀರಿಕೊಂಡಿರುತ್ತಾರೆ. ಪತ್ರಬರಹಗಾರರ ಸಹಿಯನ್ನು ನಿಪಿ-1 (ಆಯ್) ಎಂದು ಗುರ್ತಿಸಲಾಯಿತು. ದಿ ಃ 21-10-2015 ರಂದು ಪ್ರತಿವಾದಿಗಳಿಗೆ ನೀಡಿರುವ ನೋಟೀಸಿನ ಪ್ರತಿ ನಿಪಿ-2 ಎಂದು, ಆರ್‌ಟಿಸಿಯನ್ನು ನಿಪಿ-3 ಎಂದು, ಮ್ಯುಟೇಶನ ರಜಿಸ್ಟರನುನ ನಿಪಿ-4 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-5 ಎಂದು, ನೋಟಿಸು ಜಾರಿಯಾಗದೇ ವಾಪಸ್ಸಾದ ಅಂಚೆ ಲಕೋಟೆಯನ್ನು ನಿಪಿ-6 ಎಂದು, ಪ್ರತಿವಾದಿ ಪರ ವಕೀಲರು ನೀಡಿರುವ ಮರುತ್ತರವನ್ನು ನಿಪಿ-7 ಎಂದು ಗುರ್ತಿಸಲಾಯಿತು.

ಆದ್ದರಿಂದ ಈ ದಾವೆಯಲ್ಲಿ ಡಿಕ್ರಿಮಾಡಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಅನುಮತಿ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.